ರಾತ್ರಿಯ ಕೊನೆಯ ಜಾವದಲ್ಲಿ ನಿದ್ರೆಯೊಂದಿಗೆ ಬಂದ ಕಪ್ಪನೆಯ ಕೊಬ್ಬಿದ ಕನಸುಗಳು ಅವಳನ್ನು ಹುಡುಕಿಕೊಂಡು ಬಂದವು.

ಯಾರೋ ತೆರೆದಿಟ್ಟ ಬಾಗಿಲು, ಕಿಟಕಿ, ವೆಂಟಿಲೇಟರುಗಳ ಮುಖೇನ ಕಪ್ಪುರೆಕ್ಕೆಗಳು ನಿಶ್ಶಬ್ದದ ತೂತು ಕೊರೆದೂ ಕೊರೆದೂ ನಂತರ ಅವು ಒಳಗೆ ಈಜಿ ಬಂದವು.

ಬಯಕೆಗಳನ್ನು ತುಂಬಿಕೊಂಡ ಕಣ್ಣುಗಳು. ಕಾಣದ ತೀರಗಳಲ್ಲಿ ಬೇಟೆಯನ್ನರಸಿ ಹೊರಟ ರಾಶಿ ರಾಶಿ ಕಾಗೆಗಳ ಗುಂಪು. ಈ ಮನೆಯೇ ಆ ಎಲ್ಲ ಕಾಗೆಗಳ ಗುರಿ! ನಾನು ಮತ್ತು ನನ್ನ ಗಂಡ ಮುಂಗಡ–ಹಣವನ್ನು ಕೊಟ್ಟು ತಾತ್ಕಾಲಿಕವಾಗಿಯಾದರೂ ಸ್ವಂತವಾಗಿಸಿಕೊಂಡ ಈ ಮನೆ!

ಅವು ಹಾರಲಾರಂಭಿಸಿ ಯುಗಾಂತರಗಳೇ ಆಗಿರಬೇಕೆಂದು ಅವಳಿಗೆ ಅನಿಸಿತು.

ಹಲವಾರು ಕಾಲಗಳನ್ನು ದಾಟಿ, ಹಲವಾರು ಋತುಗಳನ್ನೂ ಅರಿತು ಬರುವ ಅವುಗಳ ಕಪ್ಪಾದ ರೆಕ್ಕೆಗಳಲ್ಲಿ ದೂಳು ಮೆತ್ತಿಕೊಂಡಿದ್ದವು. ಅವುಗಳ ಪುಕ್ಕಗಳ ತುದಿಗಳಲ್ಲಿ ಮಂಜು ಅಂಟಿಕೊಂಡಿದ್ದವು. ನರೆತುಕೊಂಡಿದ್ದ ಕುತ್ತಿಗೆಗೆ ಮರಳಿನಿಂದಾದ ಕೆಂಧೂಳು. ಕಣ್ಣುಗಳು–ಓ... ದೇವರೆ! ಆ ಕಣ್ಣುಗಳ ಕಪ್ಪಿಗೆ ಯಾವ ಕಡಿಮೆಯೂ ಇಲ್ಲ. ಅವುಗಳಿಂದ ಬಾಣಗಳು ಹಾರಿ ಬರುತ್ತಿವೆ.

ಅವು ತಮ್ಮನ್ನೆ ಕುಕ್ಕಿ ನುಂಗಲು ಬರುತ್ತಿವೆ.

ಅವುಗಳ, ಬಾಯಾರಿದ ಕಣ್ಣುಗಳ ಮುಂದೆ ಅವಳು ನಿಟ್ಟುಸಿರಿಟ್ಟಳು. ಅವಳು ಹೊದಿಕೆಯ ತುದಿಯಲ್ಲಿ ಉಗುರನ್ನು ತೂರಿಸಿದಳು.

ಬೆವರು ಧಾರಾಕಾರವಾಗಿ ಹರಿಯಿತು.

ಅವಳ ಹೆಗಲ ಮೇಲೆ ಕೈಯಿಟ್ಟು ಗಂಡ ಕೇಳಿದ: ''ಎಂತಹ ನಿದ್ರೆಯಿದು. ಒಂದುವೇಳೆ ಹದ್ದೊ ಗಿಡುಗನೊ ಬಂದು ಎತ್ತಿಕೊಂಡು ಹೋದರೂ ನಿನಗೆ ಗೊತ್ತಾಗ್ತಾ ಇರಲಿಲ್ವಾಂತ!''

ಉಗುರಿನ ತುದಿಯಿಂದೆದ್ದು ಕತ್ತಲೆಯ ಆಕಾಶದದಿಂದ ಅವಳು ನೆಲಕ್ಕಿಳಿದಳು.

ಹೊದಿಕೆಯನ್ನು ಮೇಲಕ್ಕೆಳೆದು ದೇಹವನ್ನು ಮುಚ್ಚುತ್ತಾ ಅವಳು ಹೇಳಿದಳು:

